<u>ದಿನಾಂಕ : *25-07-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು : *4* ನೇ ಎದರುದಾರರ ಪರವಾಗಿ ಶ್ರೀಮತಿ ಬಿ ಜಿ ಎಸ್ . ವಕೀಲರಿಂದ,</u>

ಮೃತ ಹನಮಂತ ನನ್ನ ಸಹೋದರ. ಅವನ ಮದುವೆ ಆಗಿರಲಿಲ್ಲ. ನೀವು ಏನು ಕೆಲಸ ಮಾಡುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ನನ್ನ ಅಣ್ಣ ತೀರಿಕೊಂಡ ನಂತರ ನಾನು ಅಂಗಡಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದು ಹೇಳುತ್ತಾರೆ. ನನಗೆ ತಿಂಗಳಿಗೆ *3* ರಿಂದ *4* ಸಾವಿರ ರೂ.ಗಳ ಸಂಬಳ ಬರುತ್ತದೆ. ನನ್ನ ಮೊದಲು ಕೆ ಎಸ್ ಆರ್ ಟಿ ಸಿ ಯಲ್ಲಿಕೆಲಸ ಮಾಡುತ್ತಿದ್ದು, ಅವರು ತೀರಿಕೊಂಡಿರುತ್ತಾರೆ. ಪೆನ್ಸನ್ ನನ್ನ ತಾಯಿಗೆ ಬರುವುದಿಲ್ಲ. ಟ್ಯಾಂಕರ ಚಾಲಕನ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದರೆ ಸರಿ. ನನ್ನ ಅಣ್ಣ ಚಾಲಕ ಇದ್ದ ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನನ್ನ ಅಣ್ಣನಿಗೆ ತಿಂಗಳಿಗೆ *40* ಸಾವಿರ ರೂ. ಸಂಬಳ ಬರುತ್ತಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಈ ಕುರಿತು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ *35* ರಿಂದ *40* ವರ್ಷ ವಯಸ್ಸು ಇತ್ತು ಎಂದರೆ ಸಾಕ್ಷಿದಾರರು ನನ್ನ ಅಣ್ಣನಿಗೆ *28* ರಿಂದ *30* ವರ್ಷ ವಯಸ್ಸು ಇತ್ತು ಎಂದು ಹೇಳುತ್ತಾರೆ. ಟ್ಯಾಂಕರ ಮತ್ತು ಲಾರಿಗೆ ಪರಿಮಿಟ್ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ನನ್ನ ಅಣ್ಣನ ಆದಾಯದ ಮೇಲೆ ಅವಲಂಬಿತ ಆಗಿರಲಿಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣಕ್ಕೊಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂ